ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 329
2. ಸದಸ್ಯರ ಹೆಸರು : ಶ್ರೀ ಅ.ದೇವೇಗೌಡ.
3. ಉತ್ತರಿಸಬೇಕಾದ ದಿನಾಂಕ : 10.12.2020
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಸಚಿವರು.

ಕ್ರ ಸಂ.	ಪ್ರಶ್ನೆ	ಉತ್ತರ
ಅ	ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಮಾಡಬಾಳು ಹೋಬಳಿ, ವೈ.ಜಿ.ಗುಡ್ಡ ಡ್ಯಾಂ ಬಾರಿ ಮಳೆಯಿಂದಾಗಿ ತುಂಬಿದ್ದು, ಡ್ಯಾಂನ ಗೇಟನ್ನು ಸರಿಯಾಗಿ ಅಳವಡಿಸದೆ ಶೇಖರಣೆಯಾದ ನೀರು ಕೃಷಿ ಚಟುವಟಿಕೆಗಳಿಗೆ ಉಪಯೋಗವಾಗದೆ ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಮಾಡಬಾಳು ಹೋಬಳಿ, ವೈ.ಜಿ.ಗುಡ್ಡ ಜಲಾಶಯದ ಒಟ್ಟು ನೀರಿನ ಸಂಗ್ರಹಣಾ ಸಾಮರ್ಥ್ಯವು 98.00 ಎಂ.ಸಿ.ಎಫ್.ಟಿ. ಗಳಿದ್ದು, ಅದರಲ್ಲಿ ಲೈವ್ ಸ್ಟೋರೇಜ್ 82.00 ಎಂ.ಸಿ.ಎಫ್.ಟಿಗಳಿದ್ದು, ಡೆಡ್ ಸ್ಟೋರೇಜ್ 16.00 ಎಂ.ಸಿ.ಎಫ್.ಟಿ ಆಗಿರುತ್ತದೆ. 2020-21ನೇ ಸಾಲಿನಲ್ಲಿ ಪ್ರಸ್ತುತ ಜಲಾಶಯದಲ್ಲಿ 26.00 ಎಂಸಿಎಫ್‌ಟಿ ನೀರು ಸಂಗ್ರಹವಾಗಿರುತ್ತದೆ. ಈ ಜಲಾಶಯಕ್ಕೆ ಎಡದಂಡೆ ಮತ್ತು ಬಲದಂಡೆ ಕಾಲುವೆಗಳಿದ್ದು, ಇವುಗಳಡಿ ಒಟ್ಟು 1977 ಎಕರೆ ಅಚ್ಚುಕಟ್ಟು ಪ್ರದೇಶ ಹೊಂದಿರುತ್ತದೆ. ಎಡದಂಡೆ ಮತ್ತು ಬಲದಂಡೆ ಕಾಲುವೆ ಗೇಟುಗಳಲ್ಲಿ ಸಣ್ಣ ಪ್ರಮಾಣದ ಸೋರುವಿಕೆ ಕಂಡುಬಂದಿರುತ್ತದೆ.
ಆ	ಈ ಡ್ಯಾಂ ಕಾಮಗಾರಿಗಾಗಿ ಸರ್ಕಾರ ನಿಗಧಿಪಡಿಸಿದ್ದ ಅನುದಾನ ಎಷ್ಟು; ಕಾಮಗಾರಿಗಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು; ಕಾಮಗಾರಿಗಾಗಿ ಖರ್ಚಾಗಿರುವ ಅನುದಾನ ಎಷ್ಟು; ಈ ಡ್ಯಾಂ ಕಾಮಗಾರಿ ಯಾವಾಗ ಮುಕ್ತಾಯಗೊಂಡಿರುತ್ತದೆ; (ಪೂರ್ಣ ಮಾಹಿತಿ ನೀಡುವುದು)	ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಮಾಡಬಾಳು ಹೋಬಳಿ, ವೈ.ಜಿ.ಗುಡ್ಡ ಡ್ಯಾಂ ನಿರ್ಮಾಣಕ್ಕೆ ಪರಿಷ್ಕೃತ ಅಂದಾಜು ಮೊತ್ತ ರೂ.2713.62 ಲಕ್ಷಗಳಾಗಿದ್ದು ಸದರಿ ಕಾಮಗಾರಿಗೆ ಈವರೆವಿಗೂ ರೂ.2587.39 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಸದರಿ ಕಾಮಗಾರಿಯು 1997ನೇ ಸಾಲಿನಲ್ಲಿ ಪೂರ್ಣಗೊಂಡಿರುತ್ತದೆ.
ಇ	ಈ ಯೋಜನೆಯಿಂದ ಸುತ್ತಮುತ್ತಲು ಎಷ್ಟು ಗ್ರಾಮಗಳ ಗ್ರಾಮಸ್ಥರಿಗೆ ಕುಡಿಯುವ ನೀರಿನ ಸೌಲಭ್ಯ ದೊರಕಿದೆ; (ಮಾಹಿತಿ ನೀಡುವುದು)	ಈ ಯೋಜನೆಯಿಂದ ಸುತ್ತಮುತ್ತಲು ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯಿಂದ ಕೈಗೊಂಡಿರುವುದಿಲ್ಲ.
ಈ	ಡ್ಯಾಂ ಗೇಟನ್ನು ಈವರೆವಿಗೂ ಸರಿಪಡಿಸದೆ ಜಲಾಶಯದ ನೀರು ಪೋಲಾಗುತ್ತಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; (ವಿವರ ನೀಡುವುದು)	ಎಡದಂಡೆ ಮತ್ತು ಬಲದಂಡೆ ಕಾಲುವೆ ಗೇಟುಗಳಲ್ಲಿ ಸೋರುವಿಕೆ ಕಂಡು ಬಂದಿರುತ್ತದೆ. ಎಡದಂಡೆ ಕಾಲುವೆ ಗೇಟುಗಳಿಗೆ ಮರಳು ಚೀಲ ಹಾಕಿ ನೀರು ಸೋರುವಿಕೆಯನ್ನು ತಡೆಗಟ್ಟಲಾಗಿರುತ್ತದೆ. ಬಲದಂಡೆ ಕಾಲುವೆ ಗೇಟನ್ನು ಅಳವಡಿಸಿರುವ ಜಾಗದಲ್ಲಿ ಸುಮಾರು 30 ಅಡಿಯಷ್ಟು ನೀರು ಸಂಗ್ರಹವಾಗಿರುತ್ತದೆ. ಈ ಗೇಟಿನ ಸೋರುವಿಕೆಯನ್ನು

		ತಡೆಯಲು ನುರಿತ ಗೇಟ್ ಇಂಜಿನಿಯರ್‌ರವರಿಂದ ಪರಿವೀಕ್ಷಣೆ ಮಾಡಿಸಿ ವರದಿ ಪಡೆದು ಕ್ರಮ ವಹಿಸುವುದು ಅವಶ್ಯಕವಿದ್ದ ಕಾರಣ ದಿ: 06-12-2020 ರಂದು ನುರಿತ ಗೇಟ್ ಇಂಜಿನಿಯರ್‌ರವರು ಪರಿವೀಕ್ಷಣೆ ನಡೆಸಿರುತ್ತಾರೆ. ಗೇಟ್‌ನ ಸ್ಥಳದಲ್ಲಿ 30 ಅಡಿ ಆಳ ನೀರು ಸಂಗ್ರಹವಾಗಿರುವುದರಿಂದ, ಸೋರುವಿಕೆಯ ಸ್ಥಳವನ್ನು ಪರಿವೀಕ್ಷಣೆ ಮಾಡಲು ಹಾಗೂ ಸೋರುವಿಕೆಯ ಸ್ಥಳದ Under Water Photographyಯ ಛಾಯಾಚಿತ್ರ ತೆಗೆಯಲು, Under Water Diversಗಳ ಅವಶ್ಯಕತೆ ಇದ್ದು, ಸದರಿಯವರು ರಾಜಸ್ಥಾನದಿಂದ ಬರಬೇಕಾಗಿರುತ್ತದೆ. ಇವರು ಬಂದ ನಂತರ ಸ್ಥಳವನ್ನು ಪರಿವೀಕ್ಷಣೆ ಮಾಡಿಸಿ, ನೀರು ಸೋರುವಿಕೆಯ ಸ್ಥಳವನ್ನು ಗುರುತಿಸಿ, ತಾಂತ್ರಿಕವಾಗಿ ವಿಶ್ಲೇಷಣೆ ಮಾಡಿ ದುರಸ್ತಿ ಮಾಡುವ ಮಾರ್ಗೋಪಾಯವನ್ನು ಕಂಡು ಹಿಡಿದು ಒಂದು ವಾರದೊಳಗೆ ವರದಿಯನ್ನು ಸಲ್ಲಿಸಲಾಗುವುದೆಂದು ತಜ್ಞರು ತಿಳಿಸಿರುತ್ತಾರೆ. ಸದರಿ ವರದಿಯು ಬಂದ ತಕ್ಷಣ ಸೋರುವಿಕೆಯ ದುರಸ್ತಿ ಬಗ್ಗೆ ಕಾರ್ಯ ಕೈಗೊಂಡು ಸೋರುವಿಕೆಯನ್ನು ನಿಲ್ಲಿಸಲಾಗುವುದು.

ಕಡತ ಸಂಖ್ಯೆ: MID 74 LCQ 2020

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.